ಇಂಗ್ಲಿಷ್‌ನಲ್ಲಿ ಮೂರು ಸಂಪುಟಗಳಲ್ಲಿ ಪ್ರಕಟವಾಗಲಿದೆ. ಇನ್ನು ಆಧುನಿಕ ಬರಹಕ್ಕೆ ಬಂದರೆ ಅನಂತಮೂರ್ತಿಯವರ 'ಸಂಸ್ಕಾರ' ಕೃತಿಗೆ ಅಂತರರಾಷ್ಟ್ರೀಯ ಹೆಸರು ಇದೆ. ಹಾಗೆಯೇ ಗಿರೀಶ ಕಾರ್ನಾಡರ ನಾಟಕಗಳು ಕೂಡ ಪ್ರಸಿದ್ಧಿಯಾಗಿವೆ. ಇದೀಗ ವಿವೇಕ ಶಾನಭಾಗರ 'ಘಾಚರ್ ಘೋಚರ್' ಭಾಷಾಂತರಗೊಂಡು ಸಮರ್ಥ ಪ್ರಕಾಶನದಿಂದ ಹೊರಬಂದು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿದೆ. ಅಂತರರಾಷ್ಟ್ರೀಯ ಮಾರುಕಟ್ಟೆ ಅಂದರೆ ನೀವು ಗಮನಿಸಬೇಕು, ಲೇಖಕರಿಗಿಂತ ಪ್ರಕಾಶಕರೇ ಮುಖ್ಯ ಆಗುತ್ತಾರೆ. ಪಾಶ್ಚಾತ್ಯ ಲೇಖಕರು ಮಾರುಕಟ್ಟೆಯ ವಿಚಾರದಲ್ಲಿ ಬಹಳ ಮುಂದಿದ್ದಾರೆ. ಇದೀಗ ಅಂಥ ಮಾರುಕಟ್ಟೆಯನ್ನು ತಮ್ಮ ಬರೆಹದಿಂದ ಸರಿಗಟ್ಟುತ್ತಿರುವವರು ಅಮಿತಾವ್ ಘೋಷ್, ಅರುಂಧತಿ ರಾಯ್ ಮತ್ತು ಸಲ್ಮಾನ್ ರಶ್ದಿ ಇಂಥವರು. ಇದು ತೀರ ವಿರಳ. ಇನ್ನೂ ಬಹಳ ಒಳ್ಳೆಯ ಲೇಖಕರು ನಮ್ಮ ಪ್ರಾಂತೀಯ ಭಾಷೆಗಳಲ್ಲಿದ್ದಾರೆ. ಸಣ್ಣ ದೇಶ ಫ್ರಾನ್ಸ್, ಜಗತ್ತಿನ ಭೂಪಟದಲ್ಲಿದೆ. ಅದು ಇರುವುದು ಕರ್ನಾಟಕದಷ್ಟೆ. ಆದರೆ ಕರ್ನಾಟಕದ ಹೆಸರೆಲ್ಲಿ? ಫ್ರಾನ್ಸ್ ಎಲ್ಲಿ? ಒಂದು ಭಾಷೆ, ಪ್ರಾಂತ್ಯ ಜಾಗತಿಕ ಮಟ್ಟಕ್ಕೇರಬೇಕು ಅಂದರೆ ಅದು ವಾಣಿಜ್ಯ, ವ್ಯವಹಾರ, ಸಾಂಸ್ಕೃತಿಕ ಸಂಗತಿಗಳ ಪ್ರಚಾರ ಈ ಮೂರು ಆಯಾಮಗಳಲ್ಲಿ ಮುಂದಿರಬೇಕು. ಫ್ರಾನ್ಸಿನ ಮಹಾ ಕ್ರಾಂತಿಗಿಂತ ನಮ್ಮಲ್ಲಿ ಕಳೆದ ನೂರು ವರ್ಷದಲ್ಲಿ ನಡೆದಿರುವ ಅಹಿಂಸಾತ್ಮಕ ಕ್ರಾಂತಿ ಇದೆಯಲ್ಲ ಅದು ದೊಡ್ಡದು. ಅದನ್ನು ಜಗತ್ತಿಗೆ ಹೇಳಬೇಕಾಗಿದೆ. ನಮ್ಮಲ್ಲಿ ಅಹಿಂಸೆ, ಪ್ರಜಾಪ್ರಭುತ್ವದ ಮಾರ್ಗದಿಂದ ಮಾನವ ಸಂಬಂಧಿ ಆಶಯಗಳನ್ನು ಸಾಧಿಸುವಲ್ಲಿ ಯಶಸ್ವಿಯಾಗುತ್ತಿದ್ದೇವೆ.

◆ **ಜಗತ್ತಿನಾದ್ಯಂತ ಇಂಗ್ಲಿಷ್ ವ್ಯಾಪಕತೆ ಕುರಿತು ಏನು ಹೇಳುತ್ತೀರಿ?**

ನಿಜ, ಇಂಗ್ಲಿಷ್ ಬಳಕೆ ಜಗತ್ತಿನಾದ್ಯಂತ ಒಂದೇ ಮಾದರಿಯಲ್ಲಿ ಇಲ್ಲ. ಇಂಗ್ಲೆಂಡ್‌ನಲ್ಲಿ ಬಳಕೆಯಿರುವ ಇಂಗ್ಲಿಷ್ ಅಮೆರಿಕದಲ್ಲಿರಲು ಸಾಧ್ಯವಿಲ್ಲ. ಇಂಗ್ಲೆಂಡ್, ಅಮೆರಿಕದ ಇಂಗ್ಲಿಷ್ ಉಪಯೋಗದ ಕ್ರಮ ಭಾರತದಲ್ಲಿಲ್ಲ. 'ಪಲವುಂ ಕನ್ನಡಂಗಳ್' ಇದೆಯಲ್ಲ ಅದೇ ತರಹ ಇಂಗ್ಲಿಷ್‌ನ ಬಳಕೆಯ ವಿಧಾನ ಕೂಡ ದಲವುಂ ಇಂಗ್ಲಿಷ್‌ಗಳ್. ಭಾರತದಲ್ಲಿ ನಮ್ಮದೇ ಇಂಗ್ಲಿಷ್ ಮೂಡಿ ಬಂದಿದೆ. ಜಗತ್ತಿನ ಅನೇಕ ಭಾಷೆಗಳ ನಡುವೆ ಇಂಗ್ಲಿಷ್ ತನ್ನ ಪ್ರಾಮುಖ್ಯತೆಯನ್ನು ಗಳಿಸಿಕೊಂಡಿದ್ದರ ಚರಿತ್ರೆ ಎಲ್ಲರಿಗೂ ಗೊತ್ತೇ ಇದೆ. ಹಾಗೆಯೇ ಭಾರತದಲ್ಲಿ ಇಂಗ್ಲಿಷ್ ಇಲ್ಲಿಯದೇ ಎಂಬಂತೆ ನೆಲೆಯೂರಿಬಿಟ್ಟಿದೆ.

◆ **ಹಾಗಾದರೆ ಪ್ರಾಂತೀಯ ಭಾಷೆಗಳು ಮತ್ತು ಇಂಗ್ಲಿಷ್ ಸಂಬಂಧ ಕುರಿತು ಏನು ಹೇಳುತ್ತೀರಿ?**

ನಾನು ಕನ್ನಡ ಮಾಧ್ಯಮದಲ್ಲಿ ಓದಿದವ. ಪ್ರಾಂತೀಯ ಭಾಷೆ ಅಥವಾ ಕನ್ನಡ–ಇಂಗ್ಲಿಷ್ ಸಂಬಂಧ ಕುರಿತು ಮಾತನಾಡಿದರೆ ಯಾರೂ ತಪ್ಪು ತಿಳಿಯಬೇಕಾದ ಅಗತ್ಯವಿಲ್ಲ. ಕನ್ನಡ–ಇಂಗ್ಲಿಷ್ ಸಂಬಂಧ ನಕಾರಾತ್ಮಕವಾದುದಲ್ಲ. ಅದನ್ನು ಸಕಾರಾತ್ಮಕವಾಗಿ ನೋಡಬೇಕಾಗಿದೆ. ನಾನು ಓದುವ ಕಾಲಕ್ಕೆ ಇಂಗ್ಲಿಷ್ ಕಲಿತವ. ಈಗ ಭಾಷಾಶಾಸ್ತ್ರ ಅಧ್ಯಯನ ಮಾಡುತ್ತಿದ್ದೇನೆ. ಇಷ್ಟಾಗಿ ಒಂದು ಪ್ರಾಂತೀಯ ಭಾಷೆ ಮತ್ತು ಇಂಗ್ಲಿಷ್ ಸಂಬಂಧ ಕುರಿತು ಯೋಚಿಸುತ್ತಲೇ ಇರುತ್ತೇನೆ. ಹಿಂದೆ ಕನ್ನಡ, ಸಂಸ್ಕೃತ ಹೇಗೋ ಹಾಗೆಯೇ ಈಗ ಕನ್ನಡ ಮತ್ತು ಇಂಗ್ಲಿಷ್. ಸಂಸ್ಕೃತ ಪದಗಳು ಹಿಂದಿನಿಂದಲೂ ಹೇಗೆ ಕನ್ನಡವೇ ಆಗಿದೆಯೋ ಹಾಗೆ ಈ ಐವತ್ತು ವರ್ಷಗಳಲ್ಲಿ ಇಂಗ್ಲಿಷ್ ಕನ್ನಡದೊಂದಿಗೆ ಸೇರಿಕೊಂಡಿದೆ. ಪ್ರತಿ ವಾಕ್ಯದಲ್ಲಿಯೂ ಕನ್ನಡದೊಂದಿಗೆ ನಾಲ್ಕಾರು, ಹತ್ತಾರು ಇಂಗ್ಲಿಷ್